ದಾರಿದ್ರಯು ನಿಬದ್ಧಾ

-ಮೊದಲನೇ ಪುಟದಿಂದ

ನ್ಯಾಯ–ವೈಶೇಷಿಕ ದರ್ಶನಗಳು ಜಗತ್ತು 'ಇದೆ' ಎಂದು ಪ್ರತಿಪಾದಿಸುತ್ತವೆ. ವೇದಗಳ ಸಾರಗಳಂತಿರುವ ಉಪನಿಷತ್ತುಗಳು ಕೂಡ, 'ಕಣ್ಣು ತೆರೆದರೆ ಜಗತ್ತು. ಕಣ್ಣು ಮುಚ್ಚಿದರೆ ಇಲ್ಲ' ಎಂದು ಮಾರ್ಮಿಕವಾಗಿ ಹೇಳುತ್ತವೆ. ಎಲ್ಲ ಇರುವುದು ನಮ್ಮ ಮನಸ್ಸಿನಲ್ಲಿ, ಉದಾಹರಣೆಗೆ ನಮಗೆ ಪರಿಚಿತರಾದ ಯಾರೋ ಇದ್ದಾರೆ ಎಂದು ಭಾವಿಸೋಣ. ಅವರು ಪರಿಚಿತರಾಗಿರುವುದರಿಂದ ನಮ್ಮ ಮನಸ್ಸಿನಲ್ಲಿ ಇದ್ದಾರೆ. ಪರಿಚಿತರಾಗುವವರೆಗೂ ಅವರು ನಮ್ಮ ಜಗತ್ತಿನ ಭಾಗವಾಗಿರಲಿಲ್ಲ. ದೂರದ ಆಸ್ಟ್ರೇಲಿಯಾದಲ್ಲಿ ರಿಚರ್ಡ್‌ಸನ್ ಇದ್ದಾನಾದರೆ ಅವನು ನಮಗೆ ಪರಿಚಿತನಾಗಿದ್ದರೆ ನಮ್ಮ ಮನಸ್ಸು ಅವನನ್ನು ಊಹಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಇಲ್ಲ. ಹಾಗಾಗಿ, ನಾವು ನಿದ್ರಿಸಿದಾಗ ಜಗತ್ತು ಇಲ್ಲ, ನಿದ್ದೆಯಿಂದೆದ್ದಾಗ ಮತ್ತೆ ಜಗತ್ತು ಸಾಕಾರಗೊಳ್ಳುತ್ತದೆ. ಇದನ್ನೇ ನಿತ್ಯ ಪ್ರಳಯ ಎನ್ನುವುದುಂಟು.

ಕ್ರಿಕೆಟ್‌ನ ಬಗ್ಗೆ ನನಗೆ ಆಸಕ್ತಿಯಿಲ್ಲ ಎಂದು ಭಾವಿಸುವಿರಾದರೆ ಸಚಿನ್ ತೆಂಡುಲ್ಕರ್ ಶತಕ ಪೂರೈಸಿದ ಸಂಗತಿ ನನಗೆ ಮುಖ್ಯವಾಗುವುದಿಲ್ಲ. ಅದನ್ನು ಕೇಳಿದ ನಾನು 'ಹೌದಾ!' ಎಂದಷ್ಟೇ ಉದ್ಗರಿಸಿ ಸುಮ್ಮನಾಗುತ್ತೇನೆ. ಆದರೆ, ಅದರ ಬಗ್ಗೆ ಆಸಕ್ತಿ ಇರುವವರು ಸಚಿನ್ ತೆಂಡುಲ್ಕರ್‌ನ ಪ್ರತೀ ಆಟಗಳನ್ನು ಕಣ್ಣೆದುರು ತಂದುಕೊಳ್ಳುತ್ತ ವಿವರಿಸುತ್ತಾರೆ. ಹಾಗಾಗಿ, ಯಾವುದೇ ವಿಷಯದ ಕುರಿತ ನಿರಾಸಕ್ತಿ ಅಥವಾ ಉದಾಸೀನತೆ ಇದೆ ಎಂಬ ಮಾತ್ರಕ್ಕೆ ಆ ವಿಷಯದ ಅಸ್ತಿತ್ವವಿಲ್ಲ ಎಂಬುದಕ್ಕೆ ಅನ್ಯರ ದೃಷ್ಟಿಯಿಂದ ಪುರಾವೆಯಿಲ್ಲ. ಆದರೆ, ನಮ್ಮ ಮಟ್ಟಿಗಂತೂ ಅದೇ ಹೌದು. ಹೀಗಾಗಿ, ಇದೊಂದು ಅತ್ಯಂತ ಸಾಪೇಕ್ಷ ಪ್ರಪಂಚ. ಜಗತ್ತು, ಸೃಷ್ಟಿ ಇತ್ಯಾದಿಗಳನ್ನು ನಾವು ನಮ್ಮ ಊಹೆಯ ಪರಿಧಿಯೊಳಗೆ ತಂದುಕೊಂಡು ಪರಿಭಾವಿಸುತ್ತೇವೆಯೇ ಹೊರತು ಅವುಗಳ ಸ್ಥಿತಿಯ ಕುರಿತ ಆತ್ಯಂತಿಕ ಸತ್ಯ ಅದಾಗಿರಲಾರದು. ಈ ಉಕ್ತಿಯು 'ಹಿಗ್ಸ್ ಬೋಸನ್' ಎಂಬ ದೇವಕಣದ ಸಂಶೋಧನೆಗೂ ಅನ್ವಯಿಸುತ್ತದೆ. ಸೃಷ್ಟಿ ಎಂಬುದು ನಿರಂತರ ಅಥವಾ ಸೃಷ್ಟಿಯ ಮೂಲ ನಿಗೂಢ ಎಂದು ವಿಶ್ವಾಸಪಡುವ ವೇದಾಂತಿಗಳ ದೃಷ್ಟಿಯಲ್ಲಿ ಇದು ತಲುಪಬೇಕಾದ ದೀರ್ಘ ಹಾದಿಯ ಒಂದು ಬಿಂದು ಮಾತ್ರ. ಅದರಾಚೆಗೂ ದಾರಿ ವಿಸ್ತಾರವಾಗಿದೆ. ಆದರೆ, ಆಧುನಿಕ ವಿಜ್ಞಾನಕ್ಕೆ ಮಾತ್ರ ಇಂಥ ಒಂದೊಂದು ಹಂತಗಳೂ ಮುಖ್ಯವೆನಿಸುತ್ತವೆ.

ಸೃಷ್ಟಿ–ದೃಷ್ಟಿ ವಾದ ಮತ್ತು ದೃಷ್ಟಿ–ಸೃಷ್ಟಿವಾದಗಳೆಂಬ ಎರಡು ವಾದಗಳಿವೆ. ಮೊದಲನೆಯದು ವಾಸ್ತವವಾದವಾದರೆ ಎರಡನೆಯದು ಆದರ್ಶವಾದ. ಜಗತ್ತಿದ್ದಂತೆ ನಾವು ಕಾಣುತ್ತೇವೆ ಎಂಬುದು ಮೊದಲನೇ ವಾದದ ತಾತ್ಪರ್ಯವಾದರೆ ನಾವು ಕಂಡಂತೆ ಜಗತ್ತು ಎಂಬುದು ಎರಡನೇ ವಾದದ ಸಾರಾಂಶ. ಸಾಂಪ್ರದಾಯಿಕ ಭೌತ ಶಾಸ್ತ್ರವು ಮೊದಲ ವಾದಕ್ಕೆ ಮಾದರಿಯಾದರೆ ಆಧುನಿಕ ಭೌತ ಶಾಸ್ತ್ರವು ಎರಡನೇ ವಾದಕ್ಕೆ ಮಾದರಿ. ಮೊದಲನೆಯದು ದ್ವೈತ ದೃಷ್ಟಿ. ಎರಡನೆಯದು ಅದ್ವೈತ ದೃಷ್ಟಿ. ಎರಡಕ್ಕೂ ಯುಕ್ತವಾದ ಬೆಲೆ ಉಂಟು, ಪ್ರಯೋಜನವೂ ಉಂಟು.

ಆ್ಯಟಮ್‌ನ್ನು ಪರಮಾಣು ಎಂದು ಕರೆದು ಇದು ಸೃಷ್ಟಿಯ ಆತ್ಯಂತಿಕ ಮೂಲವೆಂದು ವಿಜ್ಞಾನ ಹೇಳುತ್ತದೆ. ಆದರೆ, ಪರಮಾಣುವಿಗೆ ಆಕಾರ, ತೂಕ, ಆಯಾಮ ಎಲ್ಲವೂ ಇದೆ. ಆದರೆ, ನಮ್ಮ ಜ್ಞಾನಮೂಲಗಳಲ್ಲಿ ಹೇಳಲಾಗುವ ಪರಮಾಣು ವಿಜ್ಞಾನದ ಆ್ಯಟಮ್ ಅಲ್ಲ. ಅದು 'ನಿರವಯವಿ'ಯಾದುದು. ಅಂದರೆ, ಅದಕ್ಕೆ ಆಕಾರವಿಲ್ಲ, ತೂಕವಿಲ್ಲ, ಆಯಾಮಗಳಿಲ್ಲ, ಅಂಥ ಎರಡು ಪರಮಾಣುಗಳು ಸೇರಿ ದ್ವ್ಯಣುಕವಾಗುತ್ತದೆ, ಮೂರು ದ್ವ್ಯಣುಕಗಳು ಸೇರಿ ತ್ರ್ಯಣುಕವಾಗುತ್ತದೆ, ನಾಲ್ಕು ತ್ರ್ಯಣುಕಗಳು ಸೇರಿ ಚತುರಣುಕಗಳಾಗುತ್ತವೆ. ಹೀಗೆ ಸಾವಯವಿಯಾಗಿ ಜಗತ್ತು ಮುಂದುವರಿಯುತ್ತದೆ ಎಂಬುದು ನ್ಯಾಯ–ವೈಶೇಷಿಕದ ವಿವರಣೆ. ಅಲ್ಲದೆ, ಹೀಗಾಗುವುದಕ್ಕೆ ಈಶ್ವರ ಸಂಕಲ್ಪವೇ ಕಾರಣ ಎಂದು ಆ ದರ್ಶನದ ನಂಬಿಕೆ. ಜೈನ ಗ್ರಂಥಗಳ ಪ್ರಕಾರ ಇದು ತನ್ನಿಚ್ಛೆಯಂತೆ ಸಂಭವಿಸುತ್ತದೆ. ಮೀಮಾಸಕರು ಜಗತ್ತನ್ನು ಅನಂತವಾಗಿ ಅನಾದಿಯಾಗಿ ಕಲ್ಪಿಸಿದ್ದಾರೆ. ವೇದಾಂತ ದರ್ಶನಗಳು ಈ ಅಳತೆಗೆ ಸಿಗದ ಸೃಷ್ಟಿಯನ್ನು 'ನಾವು ನೆನೆದಾಗ ಇದೆ ಮರೆತಾಗ ಇಲ್ಲ' ಎಂದು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿವೆ.

ಕಣ್ಣಿಗೆ ಕಾಣದವರಿಗೂ ನಮ್ಮ ಮಾತು ಕೇಳಿಸುತ್ತದೆ ಎಂಬ ವಿಶ್ವಾಸ ಬದುಕನ್ನು ಲವಲವಿಕೆಯನ್ನಾಗಿಸುತ್ತದೆ. ಕಾಣಿಸದ ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುವುದಿಲ್ಲವೆ?

'ಹಲೊ' ಪತ್ರಿಕೋದ್ಯಮ

-ಮೊದಲನೇ ಪುಟದಿಂದ

ಚೌಧುರಿಯವರ ಕನಸಿನ ಕೂಸಾದ ಈ ಧ್ವನಿವಾರ್ತಾ ಸೇವೆಗೆ ನಿರೀಕ್ಷೆಗೂ ಮೀರಿದ ಯಶಸ್ಸು ಲಭಿಸಿದೆ. ಸೇವೆ ಆರಂಭವಾದ ಬಳಿಕದ ಈ ಎರಡು ವರ್ಷಗಳಲ್ಲಿ ಸುಮಾರು ಒಂಬತ್ತು ಸಾವಿರ ಮಂದಿ 'ಸ್ವರ'ದ ಬಳಕೆದಾರರಾಗಿ ಮಾರ್ಪಟ್ಟಿದ್ದಾರೆ. ಈ ವಾರ್ತಾ ಸಂಸ್ಥೆ ಇದುವರೆಗೆ ಸುಮಾರು 30,000 ಫೋನ್ ಕರೆಗಳನ್ನು ದಾಖಲಿಸಿಕೊಂಡಿದೆ. ಸುಮಾರು 750 ಸುದ್ದಿಗಳನ್ನು ಪ್ರಕಟಿಸಿದೆ/ಪ್ರಸಾರಿಸಿದೆ. ಇವುಗಳಲ್ಲಿ ಗರಿಷ್ಠ ಪರಿಣಾಮ ಬೀರಿದ ವರದಿಗಳ ಸಂಖ್ಯೆಯೂ ಗಣನೀಯ.

ಉದಾಹರಣೆಗೆ, ಕಳೆದ ವರ್ಷದ ಜನವರಿಯಲ್ಲಿ '**ಸ್ವರ**'ವು ಪಿತ್‌ಬಸುಭೋಯ್ ಎಂಬ ಅಂಗವಿಕಲ ಕೂಲಿಕಾರ್ಮಿಕನ ಜತೆಗೆ ನಡೆಸಿದ ಸಂದರ್ಶನವೊಂದನ್ನು ಪ್ರಕಟಿಸಿತು. ಈತ ಸರಕಾರದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತನಗೆ ದೊರೆತಿದ್ದ 100 ದಿನಗಳ ಕೆಲಸಕ್ಕೆ ಪಾವತಿಯಾಗಬೇಕಿದ್ದ ಹಣ ಸಿಗದೆ ಒದ್ದಾಡುತ್ತಿದ್ದವನು. ಕೈಯಲ್ಲಿ ಕಾಸಿರದ ಕಾರಣ ಕಾಯಿಲೆಯಿಂದ ನರಳುತ್ತಿದ್ದ ತನ್ನ ಹಸುಗೂಸನ್ನು ಆಸ್ಪತ್ರೆಗೆ ಒಯ್ಯಲು ಸಾಧ್ಯವಾಗದೆ, ಕೊನೆಗೆ ಮಗುವನ್ನೇ ಕಳೆದುಕೊಂಡ ನತದೃಷ್ಟ ಈತ. 'ಸ್ವರ'ದ ಈ ಆಘಾತಕಾರಿ ಸಂದರ್ಶನವನ್ನು ಬಳಿಕ ರಾಷ್ಟ್ರೀಯ ಮಟ್ಟದ ಪತ್ರಿಕೆಗಳೂ ಎತ್ತಿಕೊಂಡವು. ಈ ಮೂಲಕ ಕೂಲಿ ಪಾವತಿ ಬಾಕಿ ಕುರಿತ ಪಿಡುಗಿನ ಮೇಲೆ 'ಹೊರ ಜಗತ್ತಿನ' ಗಮನವೂ ಹರಿಯುವಂತಾಯಿತು ಎನ್ನುತ್ತಾರೆ ಸಾಮಾಜಿಕ ಶೋಷಣೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ಕಾರ್ಯಕರ್ತರು. ಸಂದರ್ಶನದ ಬಳಿಕ ಕೂಲಿಕಾರ್ಮಿಕ ಪಿತ್‌ಬಸು ಭೋಯ್‌ನಲ್ಲೂ ಎಚ್ಚರ ಮೂಡಿದೆ. ಇಂದು ಆತನ ವ್ಯಕ್ತಿತ್ವವನ್ನೇ ಬದಲಿಸಿದೆ. ಇದು ಆತ 'ಸ್ವರ' ಸಂಸ್ಥೆಯ ಬಳಕೆದಾರನೂ ಹೌದು. ಅದಕ್ಕೆ ಆಗಿಂದಾಗ ಮಾಹಿತಿಗಳನ್ನು ಒದಗಿಸುತ್ತಿರುವ ವರದಿಗಾರನೂ ಹೌದು.

ಭದ್ರತಾ ಪಡೆಗಳ ದಾಳಿಯಿಂದ ಧ್ವಂಸಗೊಂಡ ಹಳ್ಳಿಗಳ ಅವಸ್ಥೆ, ಪೊಲೀಸರಿಂದ ನಡೆಯುವ ಪಾಶವೀಕೃತ್ಯಗಳು, ಬಡಮಕ್ಕಳಿಗೆ ಆಹಾರ ವಿತರಣೆ ಕುರಿತ ಯೋಜನೆಗೆ ಹಲವು ತಿಂಗಳಿಂದ ಆಹಾರಧಾನ್ಯ ಪೂರೈಕೆಯಾಗದಿರುವುದು, ಗಣಿಗಾರಿಕೆಗಾಗಿ ನಡೆಸಲಾಗುತ್ತಿರುವ ಭೂಸ್ವಾಧೀನದ ವಿರುದ್ಧ ಸ್ಥಳೀಯರಿಂದ ನಡೆಯುತ್ತಿರುವ ಪ್ರತಿಭಟನೆ – ಹೀಗೆ ಹಲವು ಜನಪರ ವರದಿಗಳು '**ಸ್ವರ**'ದಿಂದ ಪ್ರಕಟಗೊಂಡಿವೆ.

ಒಟ್ಟಿನಲ್ಲಿ ಇದು ಜನರದೇ ಸ್ವರಪತ್ರಿಕೆ. ಜನರಿಗಾಗಿಯೇ ಇರುವ ಪತ್ರಿಕೆ. ಇಂಥ ಜನಸಂಪರ್ಕ ಪತ್ರಿಕೆ ಹೀಗೊಂದು ಉದ್ದೇಶದಿಂದ ಹೊರಟು ಕಾರ್ಯವೆಸಗುತ್ತಿರುವುದು ಇದೇ ಪ್ರಥಮ ಬಾರಿ. ಈ ಜನಪರ 'ಸ್ವರ ವೇದಿಕೆ'ಯಲ್ಲಿ ಪಾಲ್ಗೊಳ್ಳುವ ಮಂದಿ ಅವರದೇ ಭಾಷೆಯಲ್ಲಿ ಧ್ವನಿಯೆತ್ತಿದಾಗ ಯಾವನೋ ಪತ್ರಕರ್ತನೊಬ್ಬ ಅಥವಾ ವಕೀಲನೊಬ್ಬ ಅದನ್ನು ಗಂಭೀರವಾಗಿ ಸ್ವೀಕರಿಸುತ್ತಾರೆ. ಆ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡುತ್ತಾರೆ ಅಥವಾ ಅಧಿಕಾರಿಯೊಬ್ಬರು ತಮ್ಮ ಕಿವಿಗೆ ಇದು ಬಿದ್ದೊಡನೆ ತತ್‌ಕ್ಷಣ ಕಾರ್ಯಪ್ರವೃತ್ತರಾಗಿ ಸಮಸ್ಯೆಯನ್ನು ಪರಿಹರಿಸುತ್ತಾರೆ.

ಇಂಟರ್‌ನ್ಯಾಶನಲ್ ಸೆಂಟರ್ ಫಾರ್ ಜರ್ನಲಿಸ್ಟ್ಸ್ (ಐಸಿಜೆ)ನ ಘಟಕವಾದ ನೈಟ್ ಇಂಟರ್‌ನ್ಯಾಶನಲ್ ಜರ್ನಲಿಸಂ ಫೆಲೋಶಿಪ್ಸ್ *(Knight International Journalism Fellowships)*ನ ನಿರ್ದೇಶಕಿ ಎಲಿಸಾ ಟಿನ್ಸ್‌ಲೆ ಹೇಳುತ್ತಾರೆ – ಪತ್ರಿಕೋದ್ಯಮ ಪ್ರಪಂಚದಲ್ಲೇ 'ಸಿಜಿ ನೆಟ್ ಸ್ವರ' ಒಂದು ದಾಖಲೆ. ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲ್ಪಟ್ಟಂಥ ಸ್ಥಿತಿಯಲ್ಲಿರುವ ಸಮುದಾಯಗಳ ನೆರವಿಗೆ ಧಾವಿಸಬೇಕೆಂಬ ಇದರ ಉದ್ದೇಶವೇ ರೋಮಾಂಚಕಾರಿ. ಸ್ಥಳೀಯ ಸುದ್ದಿಗಳನ್ನು ಆಲಿಸುವಲ್ಲಿ ಇಂಥ ಅಲಕ್ಷಿತ ಸಮುದಾಯಗಳಿಗೆ ನೆರವಾಗುವ ನಿಟ್ಟಿನಲ್ಲಿ '**ಸ್ವರ**' ವಿನೂತನ ರೀತಿಯಲ್ಲಿ ಮೊಬೈಲ್ ಫೋನನ್ನು ಬಳಸಿಕೊಳ್ಳುತ್ತಿದೆ. ಈ ಮೂಲಕ ಅದು ಜನರ ಧ್ವನಿಯನ್ನು ಸುದೃಢವಾಗಿಸುತ್ತಿದೆ; ಇದೇ ವೇಳೆ ಸರಕಾರಗಳನ್ನು ಉತ್ತರದಾಯಿಗಳಾಗಿಸುವ ಮೂಲಕ ಜನ ಹಾಗೂ ಸರಕಾರದ ನಡುವೆ ಪಾರದರ್ಶಕತೆ ಸೃಷ್ಟಿಸುವಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಿದೆ.

ಅಂದ ಹಾಗೆ, ಶುಭ್ರಾಂಶು ಚೌಧುರಿ ಅವರಿಗೆ ನೈಟ್ ಇಂಟರ್‌ನ್ಯಾಶನಲ್ ಜರ್ನಲಿಸಂ ಫೆಲೋಶಿಪ್ ಕೂಡ ಲಭಿಸಿದೆ. ಇದಕ್ಕಿಂತಲೂ ದೊಡ್ಡ ಗೌರವವೆಂದರೆ, ಛತ್ತೀಸ್‌ಗಢದ ಮೂಲೆಮೂಲೆಗಳಲ್ಲಿರುವ ಹಳ್ಳಿಗಳ ಜನರ ಹೃದಯದಲ್ಲಿ ಅವರಿಗೆ ಲಭಿಸಿರುವ 'ಆಪತ್ ಬಾಂಧವ'ನ ಸ್ಥಾನ–ಮಾನ.

ಕಣ್ಣಿಗೆ ಕಾಣದವರಿಗೂ ನಮ್ಮ ಮಾತು ಕೇಳಿಸುತ್ತದೆ ಎಂಬ ವಿಶ್ವಾಸ ಬದುಕನ್ನು ಲವಲವಿಕೆಯನ್ನಾಗಿಸುತ್ತದೆ. ಕಾಣಿಸದ ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುವುದಿಲ್ಲವೆ?

ಸಕಾರಾತ್ಮಕ ಸರಪಳಿ...

-ಮೂರನೇ ಪುಟದಿಂದ

ಅವರು ಅಷ್ಟು ಕಷ್ಟಪಟ್ಟು ಓದಿದ ಕಾರಣ, ನಾವೆಲ್ಲ ಪುಸ್ತಕವನ್ನು ಕೈಯಲ್ಲಿ ಹಿಡಿದೇ ಹುಟ್ಟಿದೆವು. ನಮಗೆ ವಿದ್ಯಾಭ್ಯಾಸ ನಿರಾಂತಕವಾಗಿ ನಿರಾಯಾಸವಾಗಿ ದೊರೆಯಿತು. ನಿಮ್ಮ ನಾಲ್ಕೂ ಮಕ್ಕಳನ್ನು ಎಷ್ಟೇ ಕಷ್ಟವಾದರೂ ಓದಿಸಿ ಬಿಡಿ. ನಾಳೆ ಈ ಮಕ್ಕಳು, ಇಂತಹ ನಲವತ್ತು ಮಕ್ಕಳಿಗೆ ಸಹಾಯ ಮಾಡುವಷ್ಟು ಗಟ್ಟಿಯಾಗಿ ಬೆಳೆಯುತ್ತಾರೆ" ಆತ ಖುಷಿಯಾದ.

ಮೂರು ವರ್ಷದ ಹಿಂದೆ, ಮೈಸೂರಿಗೆ ಬಂದ ಚಿಕ್ಕಪ್ಪನ ಜೊತೆಯಲ್ಲಿ, ಅಪ್ಪ ವಿದ್ಯಾರ್ಥಿಯಾಗಿ ಓದುತ್ತಿದ್ದ ಕಾಲದ ತಾಣಗಳನ್ನೆಲ್ಲ ಅಲೆದಿದ್ದೆ. ಚಿಕ್ಕಪ್ಪ 'ಪರಕಾಲ ಮಠ'ದಲ್ಲೂ ಒಂದಷ್ಟು ದಿನ ಊಟ ದೊರೆತ ವಿಷಯ ತಿಳಿಸಿದ್ದರು. 'ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಇಷ್ಟಗಲ ಬಾಳೆ ಎಲೆ ತುಂಬಾ ಅನ್ನಹುಳಿ ಹಾಕಿ ಕೈಗಿಡುತ್ತಿದ್ದರು' ಚಿಕ್ಕಪ್ಪ ನೆನೆದರು.

ನನ್ನ ತಂದೆಯೂ ಚಿಕ್ಕಪ್ಪನೂ ಅದನ್ನು ತಿಂದು ಹೊಟ್ಟೆ ತುಂಬಿಸಿಕೊಂಡು ಓದಿದ್ದರು. ಪರಕಾಲ ಮಠ ಬ್ರಾಹ್ಮಣರ ಮಠ, ಆದರೆ ಓದುವ ಮಕ್ಕಳಿಗೆ ಅನ್ನದಾನ ಮಾಡುವುದು ಪರಮ ಪುಣ್ಯವೆಂದು ನಂಬಿದ ಕಾಲ. ಜಾತಿ ನೋಡದೆ ಅವರು ಕೈಗಿಟ್ಟ ಅನ್ನ ಅಪ್ಪನ ವಿದ್ಯಾಭ್ಯಾಸಕ್ಕೆ ನೆರವಾಗಿತ್ತು. ನಾನು ಹುಟ್ಟುವ ಹೊತ್ತಿಗೆ ಅಪ್ಪ ಸರಕಾರಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದರು. ಒಬ್ಬ ವಿದ್ಯಾರ್ಥಿಗೆ ಮಾಡಿದ ಸಣ್ಣ ಸಹಾಯ, ಇಡೀ ಪೀಳಿಗೆಯನ್ನೇ ಉದ್ಧಾರ ಮಾಡಿತ್ತು.

ಅಕ್ಬರ್ ಖಾನ್ ಅವರ ಪತ್ನಿ ತಂದು ಕೊಟ್ಟ ಕಾಫಿ ಕುಡಿಯುತ್ತ ಕುಳಿತಂತೆ ನನ್ನ ಕಣ್ಣು ಮಂಚದ ಕೆಳಗೆ ಹರಿಯಿತು. ಅಲ್ಲೊಂದು ಪಾರಿವಾಳ! ಅದಿನ್ನೂ ಮರಿ. ಆಟೋದಲ್ಲಿ ಹೋಗುವಾಗ ಅನಾಥವಾಗಿ ಗಾಯಗೊಂಡ ಪಾರಿವಾಳದ ಮರಿಯನ್ನು ಹಾದಿಯಲ್ಲಿ ಕಂಡು ಅಕ್ಬರ್ ಎತ್ತಿ ತಂದಿದ್ದರು. ಅದೀಗ, ಮಂಚದ ಕೆಳಗೆ ಕಾಳು ತಿಂದು ಮಕ್ಕಳೊಡನೆ ಆಡುತ್ತಾ, ರೆಕ್ಕೆಪುಕ್ಕ ಗಟ್ಟಿ ಮಾಡಿಕೊಳ್ಳುತ್ತಿದೆ.

ಮಕ್ಕಳನ್ನು ಬೀಳ್ಕೊಟ್ಟು ಹೊರಟೆ, ಮನಸ್ಸು ಸಂತಸದಿಂದ ಹಾಡಿತ್ತು. ಅಕ್ಬರ್ ನನಗೆ ಧನ್ಯವಾದ ಹೇಳಿದ್ದರು, ನಾನು ಅವರಿಗೆ ವಂದನೆ ಹೇಳಬೇಕಿತ್ತು. ನನ್ನಪ್ಪನಿಗೆ ಅನ್ನ ಹಾಕಿದ ಮಹನೀಯರು ಆರಂಭಿಸಿದ ಒಂದು ಸಕಾರಾತ್ಮಕ ಸರಪಳಿಯ ಸಣ್ಣ ಕೊಂಡಿಯಾಗುವ ಅವಕಾಶವನ್ನು ಆತನ ಮಕ್ಕಳು ನನಗೆ ಕಲ್ಪಿಸಿಕೊಟ್ಟಿದ್ದರು. ವಿದ್ಯೆ ಪಡೆಯುವ ಈ ಮಕ್ಕಳ ಏಕಲವ್ಯ ಪ್ರಯತ್ನ ಯಶಸ್ವಿಯಾಗಲಿ ಎಂದು ಮನಸ್ಸು ಹಾರೈಸಿತು.

ಪದಬಂಧ



ಎಡದಿಂದ ಬಲಕ್ಕೆ

1. ಈ ಒತ್ತಾಯ ಅತ್ಯಾಚಾರದ ಆಸುಪಾಸು ಕೂಡ ಕಂಡೀತು (4)
3. ಕೆನ್ನೆಗೆ ಬಿಗಿದ ಏಟು (4)
5. ಕೆಂಬಣ್ಣವೂ ಹೌದು ನೆತ್ತರು ಕೂಡ ಹೌದು (3)
7. ನಡುವೆ ಮರವಿರುವ ಇಂದ್ರನೂರಿನ ರಾಜಧಾನಿ (5)
8. ನವರತ್ನಗಳಲ್ಲಿ ಒಂದು ಅವಳ ಹತ್ತಿರ ಇದೆ (3)
9. ಚರ್ಚ್ ವಲಯದಲ್ಲಿ ಫಾದರ್‌ರ ಸಾಲಲ್ಲಿ ಇನ್ನೊಂದು ಉನ್ನತ ಹುದ್ದೆ (3)
10. ಈತ ಲೆಕ್ಕ ಪತ್ರ ಬರೆಯುವವ (3)
12. ವಿದ್ಯಾಸಂಪನ್ನನಲ್ಲಿ ಇರುವ ಗುಣ (3)
13. ಪಹರೆಯವನ ಕೆಲಸ ಇಲ್ಲಿ ದಿಕ್ಕು ತಪ್ಪಿದೆ (3)
14. ದೇವರ ದೇವನನ್ನು ಹಳ್ಳಿಗರು ಹೀಗೆ ಕರೆದಾರು (3)
15. ಕಣ್ಣಲ್ಲಿ ನೆತ್ತರು ಇಲ್ಲದ ಜಾತಿಯವ (3)
17. ಹತ್ತಿಯನ್ನು ಸೇರಿಸಿ ಸಿದ್ಧಗೊಳಿಸಿದ ಮೇಲು ಹೊದಿಕೆ ಆ ಕಡೆಯಿಂದ ಬಂದಿದೆ (3)
18. ತಿರುಗಿ ಬಂದಿದೆ ಕನ್ನಡದ ಲಾಭಾಂಶ (3)
19. ಕಾವ್ಯ ಕನ್ನಡದ ದೊರೆ ಕೊನೆಯಲ್ಲಿ ಶೂನ್ಯವನ್ನೂ ಸೇರಿಸಿಕೊಂಡಿದ್ದಾನೆ (3)
21. ಭಾಗ್ಯವನ್ನು ಕರುಣಿಸುವವನು (3)
22. ಹಾಸ್ಯ ನಾಟಕ ಸಂಘಕ್ಕೆ ಒಪ್ಪುವ ಹೆಸರು (5)
24. ನಾಚಿಕೆಯಿಂದ ತಲೆ ತಗ್ಗಿಸಿದವ (3)
26. ಶವಸಂಸ್ಕಾರಕ್ಕೆ ಇರುವ ಸ್ಥಳ (4)
27. ನಿಯಮಾವಳಿಯಲ್ಲಿ ಸಡಿಲಿಕೆ (4)

ಮೇಲಿನಿಂದ ಕೆಳಕ್ಕೆ:

1. ಗೌರವಪೂರ್ವಕವಾಗಿ ಕರೆಯುವುದು ಹೀಗೆ (2)
2. ಭಾವೈಕ್ಯದ ಹಾಡಲ್ಲಿ ರಾಮನಿಗೆ ಸಾಥ್ ನೀಡುವ ಮುಸ್ಲಿಂ ಗೆಳೆಯ (3)
3. ಮೋಸ ವಂಚನೆಗೆ ಹಳ್ಳಿಯ ಜನ ಹೀಗೆಂದಾರು (4)
4. ಟಿವಿ ಆರ್ಟಿಸ್ಟ್ – ಎಂದು ನಮ್ಮೂರ ಭಾಷೆಯಲ್ಲಿ ಹೇಳುವುದು ಹೀಗೆ (9)
6. ಅಡಿಕೆ ಬೆಳೆ ಕೈಬಿಟ್ಟ ಅನೇಕರು ಈಗ ಈ ಕೃಷಿಯತ್ತ ವಾಲುತ್ತಿದ್ದಾರೆ (3)
7. ನಕಲಿ ವೈದ್ಯರನ್ನು ಅಣಕಿಸಿ ಕರೆಯಲು ಲಾಯಕ
8. ಇರುಳಿಗೆ ತದ್ವಿರುದ್ಧ ವಾದದ್ದು (3)
11. ಏನೂ ತಿಳಿಯದ ಹಳ್ಳಿಯ ಹೆಡ್ಡ (3)
12. ಅಂಕೆಯಲ್ಲಿಲ್ಲದ್ದು (3)
16. ಕತ್ತಿಯಿಂದ ಗಾಯಗೊಳಿಸುವ ಕ್ರಿಯೆ (3)
19. ಜಿಗುಟಾದ ಸಮಸ್ಯೆಗೆ ಹೊಂದಿಕೊಳ್ಳುವ ವಿಶೇಷಣ (3)
20. ಭೋಗಾಭಿಲಾಷೆ ಇಲ್ಲದವರ ನಾಡು (4)
23. ಅಫಿಧವಿತ್ ಮಾಡಿಸಬೇಕೇ? ಇವರ ಬಳಿ ಹೋಗಿ (3)
25. ಎರಡಕ್ಷರದ ಪ್ರಸಿದ್ಧಿ (2)

ಕಳೆದ ವಾರದ ಸರಿ ಉತ್ತರ



ವಾರ ಭವಿಷ್ಯ
ಎನ್. ಎಸ್. ಭಟ್

8-7-2012ರಿಂದ 14-7-2012ರ ವರೆಗೆ

ಮೇಷ: ಉದ್ಯೋಗ, ವ್ಯವಹಾರದಲ್ಲಿ ಪ್ರಗತಿಯ ಮುನ್ನಡೆ. ಸಂಮಾನಿತರಾಗುವ ಅವಕಾಶ ಬಂದೀತು. ಅನ್ವೇಷಣಾ ಕಾರ್ಯದಲ್ಲಿ ಸಫಲತೆ ಕಾಣುವಿರಿ. ಉದ್ಯೋಗದಲ್ಲಿ ಅಧಿಕಾರಿಗಳ ಸಹಕಾರದಿಂದ ನಿರಾತಂಕವಾಗುವುದು. ಪಕ್ಷಮಿತಿಗಳಾಗಿ ವರ್ತಿಸಬೇಕಾದ ಸಂದಿಗ್ಧತೆ. ಪ್ರತಿಸ್ಪರ್ಧಿಗಳಿಂದ ಪ್ರಬಲ ಸವಾಲು. ತೆರೆಮರೆಯಲ್ಲಿ ಗುಪ್ತವಾಗಿ ಕಾರ್ಯನಿರ್ವಹಿಸಬೇಕಾದ ಪರಿಸ್ಥಿತಿ. ವೃತ್ತಿರಂಗದಲ್ಲಿ ಯಾವೊಂದು ನಿರ್ಣಯ ಕೈಗೊಳ್ಳಬೇಕಾದಲ್ಲಿ ಚಿಂತಿಸಿ, ನಿರ್ಣಯ ಕೈಗೊಳ್ಳಲು ಸೂಕ್ತ ಕಾಲವಿದು. ದೇವರು ಧರ್ಮಕಾರ್ಯಗಳಿಂದ ಮಾನಸಿಕ ನೆಮ್ಮದಿ ಲಭಿಸಲಿದೆ.

ಶುಭವಾರ: ಸೋಮ, ಬುಧ, ಶನಿವಾರ.

ವೃಷಭ: ಸ್ವಜನರಲ್ಲಿ ಅನವಶ್ಯಕ ವಿರೋಧ – ಮನಸ್ತಾಪಗಳಿಗವಕಾಶ. ಧಾರಾಳತನ – ದಾಕ್ಷಿಣ್ಯ ಪ್ರವೃತ್ತಿಯಿಂದ ಬಂದ ಅವಕಾಶಗಳನ್ನು ಉಪಯೋಗಿಸಿಕೊಳ್ಳಲಾಗದ ಪರಿಸ್ಥಿತಿ ಉತ್ತಮ ಕಾರ್ಯಕೌಶಲ ದಿಂದ ಪ್ರಭಾವವೃದ್ಧಿಯಾಗುವ ಸೂಚನೆ. ಕೈಗೊಂಡ ನಿರ್ಧಾರ ಒಂದನ್ನು ಪುನಃ ಪರಿಶೀಲಿಸಬೇಕಾದ ಅನಿವಾರ್ಯತೆ. ಅನವಶ್ಯಕ ಖರ್ಚುವೆಚ್ಚಗಳು ಹಾಗೂ ದೇಹಾರೋಗ್ಯದಲ್ಲಿ ಆಗಾಗ ಏರುಪೇರುಗಳು ಸಂಭವನೀಯ. ದೂರ ಸಂಚಾರದಲ್ಲಿ ಹೆಚ್ಚಿನ ಜಾಗ್ರತೆ ವಹಿಸುವುದು ಉತ್ತಮ. ವಿದ್ಯಾರ್ಥಿಗಳಿಗೆ ಉದಾಸೀನತೆಯಿಂದ ವಿದ್ಯಾಭಂಗವಾದೀತು.

ಶುಭವಾರ: ಮಂಗಳ, ಬುಧ್ದಿ, ಗುರುವಾರ.

ಮಿಥುನ: ಆರ್ಥಿಕ ಕಾರ್ಯ ಸಫಲತೆಗಾಗಿ ಸತತ ಯತ್ನ, ಪರಿಶ್ರಮದ ಆವಶ್ಯಕತೆ . ಹೊಸ ವ್ಯವಹಾರಾರಂಭದ ಕನಸು ಸಾಕಾರಗೊಳ್ಳಲಿರುವ ಸೂಚನೆ. ವಿರೋಧಿಗಳ ಕುಯುಕ್ತಿಗೆ ಯಶಸ್ವಿ ಪ್ರತಿತಂತ್ರ ರೂಪಣೆ. ಉದ್ಯೋಗದಲ್ಲಿ ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾಗುವ ಸನ್ನಿವೇಶಗಳು. ಮಕ್ಕಳ ಕೊಂಚ ಅನಾರೋಗ್ಯ ನಿಮಿತ್ತ ಗೃಹದಲ್ಲಿ ಅಶಾಂತಿ. ಭೂ ವ್ಯವಹಾರ, ವಾಹನ ಖರೀದಿಗಳಿಗೆ ಸೂಕ್ತವಲ್ಲದ ಸಮಯವಿದು. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಟ್ಟಲ್ಲಿ ಮಾತ್ರ ಉತ್ತಮ ಫಲಿತಾಂಶವನ್ನು ಪಡೆಯಲಿದ್ದಾರೆ. ಅನವಶ್ಯಕ ದೂರ ಸಂಚಾರ ಧನವ್ಯಯಕ್ಕೆ ಕಾರಣವಾಗಲಿದೆ.

ಶುಭವಾರ: ಬುಧ, ಗುರು, ಭಾನುವಾರ.

ಕರ್ಕ: ಕಟ್ಟುನಿಟ್ಟಿನ ಶಿಷ್ಟಾಚಾರವನ್ನು ಅಳವಡಿಸಲೇಬೇಕಾದ ಅನಿವಾರ್ಯತೆ. ಆರ್ಥಿಕ ಕಾರ್ಯದಲ್ಲಿ ಮುನ್ನಡೆ. ಆತ್ಮೀಯರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ. ಕಣ್ಮರೆಯಾದ ಪ್ರಮುಖ ದಾಖಲೆ, ಕಡತಗಳ ಪುನಃ ಲಭ್ಯತೆ. ಪ್ರತಿಷ್ಠೆ ಗೌರವದ ರಕ್ಷಣೆಗಾಗಿ ಧನವ್ಯಯ ಸಂಭವ. ಅನುಮಾನ, ಸಂದೇಹಗಳಿಗೆ ಗುರಿಯಾಗಬೇಕಾದ ಪರಿಸ್ಥಿತಿ. ಆರ್ಥಿಕ ಪರಿಸ್ಥಿತಿ, ನಾನಾ ರೀತಿಯಲ್ಲಿ ಸುಧಾರಿಸಲಿದ್ದು ನಿರೀಕ್ಷಿತ ಕೆಲಸ ಕಾರ್ಯಗಳು ಪರಿಪೂರ್ಣತೆಯನ್ನು ಸಾಧಿಸಲಿದೆ. ಅವಿವಾಹಿತರ, ವಿದ್ಯಾರ್ಥಿಗಳ, ನಿರುದ್ಯೋಗಿಗಳ ಪರಿಶ್ರಮ ಸಾರ್ಥಕ್ಯ ಪಡೆಯುವುದು ನಿಶ್ಚಿತ.

ಶುಭವಾರ: ಸೋಮ, ಗುರು, ಶನಿವಾರ.

ಸಿಂಹ: ವೃತ್ತಿರಂಗದಲ್ಲಿ ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳಲಾಗದಂತಹ ಪರಿಸ್ಥಿತಿ. ಅಲಂಕಾರಿಕ ವಸ್ತು ಸಂಗ್ರಹದ ಅವಕಾಶ. ಶುಭಕಾರ್ಯದ ನಿಮಿತ್ತ ಪ್ರಯಾಣದ ಸಾಧ್ಯತೆ. ಸಂತಾನ ಅಪೇಕ್ಷಿಗಳಿಗೆ ಶುಭ ಸಮಾಚಾರ. ಘನತೆ, ಗೌರವಗಳಿಗೆ ಕುಂದುಂಟಾಗದಂತೆ ಸುಖಾಂತ್ಯಗೊಳ್ಳಲಿರುವ ಪ್ರಮಾದ ಕೃತ್ಯ. ಮಾತೃ ಆರೋಗ್ಯ ಚಿಂತೆ. ವ್ಯಾಪಾರ, ವ್ಯವಹಾರಗಳಲ್ಲಿ ಸ್ಪರ್ಧಾತ್ಮಕ ಮನೋಭಾವನೆಗಳಿಂದ ನಾನಾರೀತಿಯ ಧನವ್ಯಯಕ್ಕೆ ಕಾರಣವಾದೀತು. ವಿದ್ಯಾರ್ಥಿಗಳ ಪರಿಶ್ರಮ, ಸಮಾಧಾನಕರವಾಗಲಿದೆ. ಅವಿವಾಹಿತರು, ಬಂದ ಅವಕಾಶವನ್ನು ಹೊಂದಿಸಿಕೊಂಡರೆ ಶ್ರೇಯಸ್ಸು.

ಶುಭವಾರ: ಗುರು, ಶುಕ್ರ, ಶನಿವಾರ.

ಕನ್ಯಾ: ಧಾರ್ಮಿಕ ಕಾರ್ಯದ ಒಲವು. ಅದೃಷ್ಟದ ಸ್ಪರ್ಧೆಗಳಲ್ಲಿ ಅಚ್ಚರಿಯ ಫಲಿತಾಂಶ ಕಾಣುವಿರಿ. ಉತ್ಸಾಹದ ಚಟವಟಿಕೆಗಳು. ಉದ್ಯೋಗಿ, ವ್ಯವಹಾರದಲ್ಲಿ ಪ್ರಗತಿಯ ಮುನ್ನಡೆ. ಸನ್ಮಿತ್ರ ಸುಯೋಗ. ಅಲ್ಪ ಲಾಭಕ್ಕಾಗಿ ಸ್ವಹಿತಾಸಕ್ತಿಯನ್ನು ಬಲಿಗೊಡಬೇಕಾದ ಪರಿಸ್ಥಿತಿ. ಅಗತ್ಯ ಮಾಹಿತಿಗಳ ಲಭ್ಯತೆಯಿಂದ ನಿರಾತಂಕ ವ್ಯಾಪಾರ, ವ್ಯವಹಾರ, ಕೃಷಿರಂಗದಲ್ಲಿ ಚೇತರಿಕೆ ಅನಿರೀಕ್ಷಿತ ರೂಪದಲ್ಲಿ ಯೋಗ್ಯ ವಯಸ್ಕರಿಗೆ, ಕಂಕಣಬಲ ಪ್ರಾಪ್ತಿ, ಶೀತ, ಕಫ ಸಮಸ್ಯೆಯ ಬಗ್ಗೆ ಎಚ್ಚರವಿರಲಿ. ಆರ್ಥಿಕವಾಗಿ ತುಸು ಚೇತರಿಕೆ. ಕಾರ್ಯಾನುಕೂಲಕ್ಕೆ ಸಾಧಕವಾಗಲಿದೆ.

ಶುಭವಾರ: ಸೋಮ, ಗುರು, ಭಾನುವಾರ.

ತುಲಾ: ಪರಕಾರ್ಯ ನಿಮಿತ್ತ ಧನವ್ಯಯ. ದುಡುಕಿನ ವರ್ತನೆಯಿಂದ ಪ್ರಮಾದಕ್ಕೆ ಆಸ್ಪದ ನಿಶ್ಚಿತ. ಸದುದ್ದೇಶಕ್ಕಾಗಿ ಧನವ್ಯಯ. ಲೇಖಕರಿಗೆ ಉಪಯುಕ್ತ ಸಾಹಿತ್ಯ ಮಾಹಿತಿಗಳ ಲಭ್ಯತೆ. ಸಹೋದರನಿಂದ ಇಷ್ಟ ವಿರೋಧಿ ವರ್ತನೆಗಳು. ವೃತ್ತಿರಂಗದಲ್ಲಿ ಅವಶ್ಯ ನಿರ್ಧಾರವೊಂದು ಅನುಷ್ಠಾನಗೊಳ್ಳಲಿರುವ ಸೂಚನೆ. ದೂರ ಸಂಚಾರ, ವಾಹನ ಚಾಲನೆಗಳ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸುವುದು ಉತ್ತಮ. ಹಿರಿಯರ ದೇಹಾರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾದೀತು. ಅನವಶ್ಯಕ ಖರ್ಚುವೆಚ್ಚಗಳಲ್ಲಿ ಮಿತಿಯಿರಲಿ. ವಾರಾಂತ್ಯ ಶುಭವಾರ್ತೆ ಮನಸ್ಸು ಪ್ರಸನ್ನಗೊಳಿಸಲಿದೆ.

ಶುಭವಾರ: ಬಧ, ಶನಿ, ಭಾನುವಾರ.

ವೃಶ್ಚಿಕ: ಶೀಘ್ರ ನಿರ್ಧಾರ, ಆತುರತೆಯ ಕಾರ್ಯಪ್ರವೃತ್ತಿಯ ಅವಶ್ಯಕತೆ. ಸ್ತ್ರೀನಿಮಿತ್ತ ಕಲಹ ಅಪವಾದ ಭೀತಿ. ನವೀಕರಣ ಕಾರ್ಯ ನಿಮಿತ್ತ ಖರ್ಚು. ಮಾತೃ ಸಹೋದರ ಸಹಕಾರದಿಂದ ಶುಭಕಾರ್ಯಕ್ಕೆ ಚಾಲನೆ. ಮುಖಸ್ತುತಿ. ಹೊಗಳುವಿಕೆಗೆ ಮರುಳಾಗದಿರಿ. ಕ್ಲಿಷ್ಟಕರವಾದ ಸಮಸ್ಯೆಯೊಂದರ ಮೇಲೆ ಹತೋಟಿ, ವ್ಯಾಪಾರ, ವ್ಯವಹಾರಗಳಲ್ಲಿ, ಉದ್ಯೋಗರಂಗದಲ್ಲಿ ನಾನಾ ರೀತಿಯ ಅಪವಾದ ಅವಮಾನ ಪ್ರಸಂಗವನ್ನು ಅನುಭವಿಸುವ ಸನ್ನಿವೇಶ.. ತಾಳ್ಮೆ, ಸಮಾಧಾನದಿಂದ ಹಿರಿಯರ ಸೂಕ್ತ ಮಾರ್ಗದರ್ಶನದಿಂದ ಮುನ್ನಡೆಗೆ ಪೂರಕವಾದೀತು.

ವಾರಾಂತ್ಯ ಶುಭ ವಾರ್ತಾಶ್ರವಣ.

ಶುಭವಾರ: ಬುಧ, ಗುರು, ಶುಕ್ರವಾರ.

ಧನು: ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಸಿಕ್ಕಿದ ಅವಕಾಶವನ್ನು ಕೈಬಿಡಬೇಕಾದ ಪರಿಸ್ಥಿತಿ. ಉದ್ಯೋಗ ಅಪೇಕ್ಷಾರ್ಥಿಗಳಿಗೆ ದೂರ ಪ್ರಯಾಣದ ಅವಕಾಶ. ಮಕ್ಕಳ ಚಟುವಟಿಕೆಗಳಲ್ಲಿ ಪ್ರಗತಿ. ಆರ್ಥಿಕ ವಿಚಾರದಲ್ಲಿ ನಿರಾತಂಕ. ಸುತ್ತು ಬಳಸಿ ಕಾರ್ಯವಾದಂತಹ ಅನುಭವ. ವಿಪರೀತ ಕೆಲಸದ ಒತ್ತಡ. ವಾರಾಂತ್ಯದಲ್ಲಿ ಅಚ್ಚರಿಯ ಬೆಳವಣಿಗೆ. ಹೆಚ್ಚಿನ ಗ್ರಹಗಳು ಪ್ರತಿಕೂಲದಲ್ಲಿ ತೋರಿಬಂದರೂ ನಿಮ್ಮ ಆತ್ಮವಿಶ್ವಾಸ, ಕರ್ತವ್ಯಶೀಲತೆ, ಪ್ರಯತ್ನಬಲ, ಮುನ್ನಡೆಗೆ ಅನುಕೂಲವಾಗಲಿದೆ. ಈ ಮಧ್ಯೆ ಅನಿರೀಕ್ಷಿತ ಶುಭಫಲಗಳು ತೋರಿಬಂದು, ಮನಸ್ಸಿಗೆ ಸಮಾಧಾನವಾಗಲಿದೆ.

ಶುಭವಾರ: ಸೋಮ, ಶುಕ್ರ, ಭಾನುವಾರ.

ಮಕರ: ವೃತ್ತಿರಂಗದಲ್ಲಿ ಗೊಂದಲ ಅವ್ಯವಸ್ಥೆಗಳ ಮೇಲೆ ಹತೋಟಿ ಸಾಧಿಸುವ ಅವಕಾಶ. ಖರ್ಚುವೆಚ್ಚಾದಿಗಳ ಮೇಲೆ ನಿಗಾವಹಿಸಿ. ಸ್ನೇಹಿತರಿಂದ ಸಲುಗೆಯ ದುರುಪಯೋಗ ಸಂಭವ. ಮನೋಚಂಚಲತೆ – ಪ್ರಲೋಭನೆಗೊಳಗಾಗುವ ಸಾಧ್ಯತೆ. ತುಸು ನಿಧಾನಗತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಸಾಗಲಿರುವ ಕಾರ್ಯ ಯೋಜನೆಗಳು. ನಿರುದ್ಯೋಗಿಗಳು, ವಿದ್ಯಾರ್ಥಿಗಳು, ಯೋಗ್ಯ ವಯಸ್ಕರು, ಅದೃಷ್ಟವಂತರಾದಾರು. ಹಣಕಾಸಿನ ವ್ಯವಸ್ಥೆ ಹಂತ ಹಂತವಾಗಿ ಸಮತೋಲನವನ್ನು ಸಾಧಿಸಲಿದೆ. ಉದ್ಯೋಗಿಗಳಿಗೆ ಉದ್ಯೋಗ ಬದಲಾವಣೆ ಬಗ್ಗೆ ಚಿಂತನೆ ನಡೆಯುವುದು ಉತ್ತಮ.

ಶುಭವಾರ: ಬುಧ, ಶುಕ್ರ, ಭಾನುವಾರ.

ಕುಂಭ: ವಾರಾರಂಭದಲ್ಲಿ ಪರಿಹಾರಕ್ಕೆ ಕಷ್ಟಸಾಧ್ಯವಾದ ಸಮಸ್ಯೆಯೊಂದರ ಮೇಲೆ ಹತೋಟಿ ಸಾಧಿಸುವ ಅವಕಾಶ. ಗೃಹದಲ್ಲಿ ಶುಭಕಾರ್ಯಕ್ಕೆ ಸಂಬಂಧಪಟ್ಟ ಚಟುವಟಿಕೆಗಳು ಆರ್ಥಿಕ ಕಾರ್ಯ ವಿಳಂಬಗೊಳ್ಳಲಿರುವ ಸಾಧ್ಯತೆ. ವ್ಯವಹಾರದಲ್ಲಿ ಪ್ರಗತಿಯ ಮುನ್ನಡೆ. ಆತ್ಮೀಯರ ಅಗಲುವಿಕೆ. ಶೋಕ ಸಮಾಚಾರ. ಸಾಂಸಾರಿಕ ಸುಖ, ನಾನಾರೀತಿಯಲ್ಲಿ ಸಮಾಧಾನ ತಂದರೂ ಕಿರಿಕಿರಿ ತಪ್ಪದು. ದೂರ ಸಂಚಾರದ ಸಿದ್ಧತೆ, ಪರಿಪೂರ್ಣವಾಗಲಿದೆ. ವಿದ್ಯಾರ್ಥಿಗಳ ಪರಿಶ್ರಮ ಸಮಾಧಾನ ತಂದೀತು. ವ್ಯಾಪಾರ, ವ್ಯವಹಾರದಲ್ಲಿ ನಿರೀಕ್ಷಿತ ಫಲವಿಲ್ಲದಿದ್ದರೂ, ಆದಾಯಕ್ಕೆ ಕೊರತೆಯಾಗಲಾರದು.

ಶುಭವಾರ: ಸೋಮ, ಮಂಗಳ, ಶನಿವಾರ.

ಮೀನ: ಬಂಧು ಕುಟುಂಬಿಕರ ಮಿಲನದ ಅವಕಾಶ, ವಚನ ಪ್ರಮಾದದಿಂದ, ಮುಜುಗರಗೊಳಪಡುವ ಸಂಭವ. ಭೂ ವಿಚಾರದಲ್ಲಿ ಹಿರಿಯರಿಂದ ವಿರೋಧ ಕಟ್ಟಿಕೊಳ್ಳಬೇಕಾದ ಪರಿಸ್ಥಿತಿ. ಪ್ರಯಾಣದ ಕಾರ್ಯಕ್ರಮದಲ್ಲಿ ಬದಲಾವಣೆ. ಸ್ತ್ರೀ ಮುಖೇನ ಶುಭ ಸಮಾಚಾರ. ಆರ್ಥಿಕ ವಿಚಾರದಲ್ಲಿ ಅಚ್ಚರಿಯ ಬೆಳವಣಿಗೆ. ಧಾರ್ಮಿಕ ಕಾರ್ಯಗಳಿಂದ ಮನಸ್ಸಿಗೆ ಶಾಂತಿ, ಸಮಾಧಾನ ಸಿಗಲಿದೆ. ದಾಂಪತ್ಯ ಜೀವನದಲ್ಲಿ ಅನಗತ್ಯ ಭಿನ್ನಾಭಿಪ್ರಾಯ ಬಾರದಂತೆ, ಜಾಗ್ರತೆ ವಹಿಸಿರಿ. ಕೌಟುಂಬಿಕವಾಗಿ ನಾನಾ ರೀತಿಯ ವಿರೋಧಗಳನ್ನು ಅನುಭವಿಸುವಂತಾದೀತು. ಮಕ್ಕಳಿಂದ ಶುಭ ವಾರ್ತೆ.

ಶುಭವಾರ: ಮಂಗಳ, ಗುರು, ಶುಕ್ರವಾರ.